# ಕರ್ನಾಟಕ ಕಾವೇರಿ ಜಲಾನಯನ ಪ್ರದೇಶ ನೀರಾವರಿ ಸಂರಕ್ಷಣಾ ಅಧಿನಿಯಮ, 1991.

## ಪ್ರಕರಣಗಳ ಕ್ರಮಪಟ್ಟಿ

ಪ್ರಕರಣಗಳು:


1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.
2. ಪರಿಭಾಷೆಗಳು.
3. ನೀರಾವರಿಗೊಳಪಡುವ ಪ್ರದೇಶದಲ್ಲಿ ನೀರಾವರಿಯ ಸಂರಕ್ಷಣೆ.
4. ಅಧಿನಿಯಮದ ಅಧ್ಯಾರೋಹಿ ಪ್ರಭಾವ.
5. ತೊಂದರೆಗಳನ್ನು ನಿವಾರಿಸಲು ಅಧಿಕಾರ.
6. ನಿಯಮಗಳ ರಚನಾಧಿಕಾರ.
7. ನಿರಸನ ಮತ್ತು ಉಳಿಸುವಿಕೆಗಳು.

ಅನುಸೂಚಿ.


* * * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿರುವಂತೆ)

**1991ರ ಅಧಿನಿಯಮ 27.**-ಸಾರ್ವಜನಿಕರ ಹಿತಾಸಕ್ತಿಯಲ್ಲಿ, ಕಾವೇರಿ ಮತ್ತು ಅದರ ಉಪನದಿಗಳ ನೀರಿನ ಮೇಲೆ ಅವಲಂಬಿತವಾದ ಕರ್ನಾಟಕದಲ್ಲಿರುವ ಕಾವೇರಿ ಜಲಾನಯನ ಪ್ರದೇಶದ ನೀರಾವರಿಗೊಳಪಡುವ ಪ್ರದೇಶದಲ್ಲಿ ನೀರಾವರಿಯ ಸಂರಕ್ಷಣೆ ಮತ್ತು ಪರಿರಕ್ಷಣೆ ಅವಶ್ಯವಾಯಿತು.

ಕರ್ನಾಟಕ ಕಾವೇರಿ ಜಲಾನಯನ ಪ್ರದೇಶ ನೀರಾವರಿ ಸಂರಕ್ಷಣಾ ಅಧ್ಯಾದೇಶ, 1991 ನ್ನು ಮೇಲಿನ ಉದ್ದೇಶಕ್ಕಾಗಿ ಪ್ರಖ್ಯಾಪಿಸಲಾಯಿತು.

ಈ ವಿಧೇಯಕವನ್ನು ಮೇಲಿನ ಅಧ್ಯಾದೇಶಕ್ಕೆ ಬದಲಾಗಿ ಮಂಡಿಸಬೇಕಾಗಿದೆ.

ಆದ್ದರಿಂದ ಈ ವಿಧೇಯಕ.

(ವಿಧಾನ ಸಭೆ ವಿಧೇಯಕ, 1991ರ ಸಂಖ್ಯೆ 20 ಕಡತ ಸಂಖ್ಯೆ. ಎಲ್.ಎ.ಡಬ್ಲ್ಯೂ 46 ಎಲ್.ಜಿ.ಎನ್ 91 ರಿಂದ ಪಡೆಯಲಾಯಿತು).

* * * *

1991ರ ಕರ್ನಾಟಕ ಅಧಿನಿಯಮ ಸಂಖ್ಯೆ 27

*(1991ರ ಅಕ್ಟೋಬರ್ 12ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

# ಕರ್ನಾಟಕ ಕಾವೇರಿ ಜಲಾನಯನ ಪ್ರದೇಶ ನೀರಾವರಿ ಸಂರಕ್ಷಣಾ ಅಧಿನಿಯಮ, 1991.

(1991ರ ಅಕ್ಟೋಬರ್ 12ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಪಡೆಯಲಾಗಿದೆ)

**ಸಾರ್ವಜನಿಕರ ಹಿತಾಸಕ್ತಿಯಲ್ಲಿ, ಕಾವೇರಿ ಮತ್ತು ಅದರ ಉಪನದಿಗಳ ನೀರಿನ ಮೇಲೆ ಅವಲಂಬಿತವಾದ, ಕರ್ನಾಟಕದಲ್ಲಿರುವ ಕಾವೇರಿ ಜಲಾನಯನ ಪ್ರದೇಶದ ನೀರಾವರಿಗೊಳಪಡುವ ಪ್ರದೇಶದಲ್ಲಿ, ನೀರಾವರಿಯ ಸಂರಕ್ಷಣೆ ಮತ್ತು ಪರಿರಕ್ಷಣೆಗಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.**

ಸಾರ್ವಜನಿಕರ ಹಿತಾಸಕ್ತಿಯಲ್ಲಿ, ಕಾವೇರಿ ಮತ್ತು ಅದರ ಉಪನದಿಗಳ ನೀರಿನ ಮೇಲೆ ಅವಲಂಬಿತವಾದ, ಕರ್ನಾಟಕದಲ್ಲಿರುವ ಕಾವೇರಿ ಜಲಾನಯನ ಪ್ರದೇಶದ ನೀರಾವರಿಗೊಳಪಡುವ ಪ್ರದೇಶದಲ್ಲಿ ನೀರಾವರಿಯ ಸಂರಕ್ಷಣೆ ಮತ್ತು ಪರಿರಕ್ಷಣೆಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ನಲವತ್ತೆರಡನೇ ವರ್ಷದಲ್ಲಿ ಕರ್ನಾಟಕ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**-(1) ಈ ಅಧಿನಿಯಮವನ್ನು ಕರ್ನಾಟಕ ಕಾವೇರಿ ಜಲಾನಯನ ಪ್ರದೇಶ ನೀರಾವರಿ ಸಂರಕ್ಷಣಾ ಅಧಿನಿಯಮ, 1991 ಎಂದು ಕರೆಯತಕ್ಕದ್ದು

(2) ಇದರ ವ್ಯಾಪ್ತಿಯು ಕರ್ನಾಟಕ ರಾಜ್ಯದಾದ್ಯಂತ ಇರತಕ್ಕದ್ದು.

(3) ಇದು 1991ರ ಜುಲೈ ಇಪ್ಪತ್ತೈದನೇ ದಿನಾಂಕದಿಂದ ಜಾರಿಯಲ್ಲಿ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.**-ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಕಾವೇರಿ ಜಲಾನಯನ ಪ್ರದೇಶ" ಎಂದರೆ ಕರ್ನಾಟಕ ರಾಜ್ಯದ ಪ್ರದೇಶದೊಳಗೆ ಹರಿಯುವ ಕಾವೇರಿ ನದಿ ಮತ್ತು ಅದರ ಉಪನದಿಗಳ ಜಲಾನಯನ ಪ್ರದೇಶ;

(ಬಿ) "ನೀರಾವರಿಗೊಳಪಡುವ ಪ್ರದೇಶಗಳು" ಎಂದರೆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಪ್ರದೇಶಗಳು;

(ಸಿ) "ಅನುಸೂಚಿ" ಎಂದರೆ ಈ ಅಧಿನಿಯಮಕ್ಕೆ ಅನುಬಂಧಿಸಲಾದ ಅನುಸೂಚಿ;

(ಡಿ) "ಜಲವರ್ಷ" ಎಂದರೆ ಒಂದು ಕ್ಯಾಲೆಂಡರ್ ವರ್ಷದ ಜೂನ್ 1ನೇ ದಿನಾಂಕದಿಂದ ಪ್ರಾರಂಭವಾಗಿ ಮುಂದಿನ ಕ್ಯಾಲೆಂಡರ್ ವರ್ಷದ ಮೇ 31ನೇ ದಿನಾಂಕಕ್ಕೆ ಕೊನೆಗೊಳ್ಳುವ ವರ್ಷ.

**3. ನೀರಾವರಿಗೊಳಪಡುವ ಪ್ರದೇಶದಲ್ಲಿ ನೀರಾವರಿಯ ಸಂರಕ್ಷಣೆ.**-(1) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ವಿವಿಧ ಯೋಜನೆಗಳ ಅಡಿಯಲ್ಲಿ ನೀರಾವರಿಗೊಳಪಡುವ ಪ್ರದೇಶದಲ್ಲಿ ಕಾವೇರಿ ನದಿ ಮತ್ತು ಅದರ ಉಪನದಿಗಳ ನೀರಿನ ನೀರಾವರಿಯನ್ನು ಸಂರಕ್ಷಿಸುವುದು, ಪರಿರಕ್ಷಿಸುವುದು ಮತ್ತು ನಿರ್ವಹಿಸುವುದು ರಾಜ್ಯ ಸರ್ಕಾರದ ಕರ್ತವ್ಯವಾಗಿರತಕ್ಕದ್ದು.

(2) (1)ನೇ ಉಪ-ಪ್ರಕರಣವನ್ನು ಪರಿಣಾಮಕಾರಿಯಾಗಿಸುವ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು ಅಗತ್ಯವೆಂದು ಭಾವಿಸಬಹುದಾದಂಥ ಪ್ರಮಾಣದ ನೀರನ್ನು ಕಾವೇರಿ ನದಿ ಮತ್ತು ಅದರ ಉಪನದಿಗಳಿಂದ ರಾಜ್ಯ ಸರ್ಕಾರ ಅಥವಾ ಅದರಿಂದ ನಿಯುಕ್ತನಾದ ಇಂಜಿನಿಯರ್-ಇನ್-ಚೀಫ್ ದರ್ಜೆಗೆ ಕಡಿಮೆಯದಲ್ಲದ ದರ್ಜೆಯ ಯಾವೊಬ್ಬ ಅಧಿಕಾರಿಯು ಉಚಿತ ಮತ್ತು ಯುಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಮಧ್ಯಂತರಗಳ ಅವಧಿಯಲ್ಲಿ ಪ್ರತಿಯೊಂದು ಜಲವರ್ಷದ ಅವಧಿಯಲ್ಲಿ ನೀರನ್ನು ತೆಗೆಯಬಹುದು ಅಥವಾ ತೆಗೆಯುವಂತೆ ಮಾಡಬಹುದು.

**4. ಅಧಿನಿಯಮದ ಅಧ್ಯಾರೋಹಿ ಪ್ರಭಾವ.-** ಈ ಅಧಿನಿಯಮದ ಉಪಬಂಧಗಳು ಮತ್ತು ಅದರ ಅಡಿಯಲ್ಲಿ ರಚಿಸಲಾದ ಯಾವುವೇ ನಿಯಮಗಳು ಮತ್ತು ಆದೇಶಗಳು, ಯಾವುದೇ ಆದೇಶ ಅಥವಾ ವರದಿ ಅಥವಾ ಯಾವುದೇ ನ್ಯಾಯಾಧಿಕರಣದ ತೀರ್ಮಾನ (ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚಿನದ್ದಾಗಿರಲಿ ಅಥವಾ ತರುವಾಯದ್ದಾಗಿರಲಿ) ದಲ್ಲಿ ಏನೇ ಒಳಗೊಂಡಿದ್ದರೂ, ಅಂತರ್ ರಾಜ್ಯ ಜಲವಿವಾದ ಅಧಿನಿಯಮ, 1956ರ 6ನೇ ಪ್ರಕರಣದೊಂದಿಗೆ ಓದಿಕೊಂಡ 5ನೇ ಪ್ರಕರಣದ (2)ನೇ ಉಪ-ಪ್ರಕರಣದ ಉಪಬಂಧಗಳ ಅಡಿಯಲ್ಲಿನ ಅಂತಿಮ ತೀರ್ಮಾನವನ್ನುಳಿದು ಮತ್ತು ಅದನ್ನು ಹೊರತುಪಡಿಸಿ ಪರಿಣಾಮಕಾರಿಯಾಗಿರತಕ್ಕದ್ದು.

**5. ತೊಂದರೆಗಳನ್ನು ನಿವಾರಿಸಲು ಅಧಿಕಾರ.-**ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು, ಸಂದರ್ಭವು ಅಗತ್ಯಪಡಿಸಿದಂತೆ, ಆದೇಶದ ಮೂಲಕ, ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ಅಗತ್ಯವೆಂದು ಕಂಡುಬರುವ ಏನನ್ನಾದರೂ (ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದ) ಮಾಡಬಹುದು.

**6. ನಿಯಮಗಳ ರಚನಾಧಿಕಾರ.-**(1) ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚಿಸುವ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಬಗ್ಗೆ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು ಅಥವಾ ಆದೇಶವನ್ನು ಅದನ್ನು ರಚಿಸಲಾದ ತರುವಾಯ ಕೂಡಲೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಮೂವತ್ತು ದಿನಗಳ ಒಟ್ಟು ಅವಧಿಯಲ್ಲಿ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಸದರಿ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ರಾಜ್ಯ ವಿಧಾನಮಂಡಲದ ಯಾವುದೇ ಸದನವು ಯಾವುದೇ ನಿಯಮ ಅಥವಾ ಆದೇಶದಲ್ಲಿ ಯಾವುದೇ ಮಾರ್ಪಾಟನ್ನು ಮಾಡಿದರೆ ಅಥವಾ ಯಾವುದೇ ನಿಯಮ ಅಥವಾ ಆದೇಶವು ಪರಿಣಾಮಕಾರಿಯಾಗತಕ್ಕದ್ದಲ್ಲವೆಂದು ನಿರ್ದೇಶಿಸಿದರೆ ಮತ್ತು ಮಾರ್ಪಾಟು ಅಥವಾ ರದ್ದಿಯಾತಿಯನ್ನು ಮತ್ತೊಂದು ಸದನವು ಅಂಗೀಕರಿಸಿದರೆ, ಅಂಥ ನಿಯಮ ಅಥವಾ ಆದೇಶವು ಆ ತರುವಾಯ, ಸಂದರ್ಭಾನುಸಾರ, ಅಂಥ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಈ ನಿಯಮ ಅಥವಾ ಆದೇಶದ ಅಡಿಯಲ್ಲಿ ಈ ಮುಂಚೆ ಮಾಡಲಾದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗಿರತಕ್ಕದ್ದಲ್ಲ.

**7. ನಿರಸನ ಮತ್ತು ಉಳಿಸುವಿಕೆಗಳು.-**(1) ಕರ್ನಾಟಕ ಕಾವೇರಿ ಜಲಾನಯನ ಪ್ರದೇಶ ನೀರಾವರಿ ಸಂರಕ್ಷಣಾ ಅಧ್ಯಾದೇಶ, 1991 (1991ರ ಕರ್ನಾಟಕ ಅಧ್ಯಾದೇಶ 6) ಈ ಮೂಲಕ ನಿರಸಿತವಾಗಿದೆ.

(2) ಹಾಗೆ ನಿರಸನಗೊಳಿಸಿದ್ದಾಗ್ಯೂ, ಸದರಿ ಅಧ್ಯಾದೇಶದಿಂದ ಮಾಡಲಾದ ಯಾವುದನ್ನು, ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ಮಾಡಲಾದುದೆಂದು ಅಥವಾ ಕೈಗೊಳ್ಳಲಾದುದೆಂದು ಭಾವಿಸತಕ್ಕದ್ದು.

**ಅನುಸೂಚಿ**

**(ಪ್ರಕರಣ 2(ಬಿ) ನೋಡಿ)**

**ಕರ್ನಾಟಕದ ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಾವರಿಗೊಳಪಡುವ ಪ್ರದೇಶಗಳು**

| ಕ್ರಮ ಸಂಖ್ಯೆ | ಯೋಜನೆಯ ಹೆಸರು | ನೀರಾವರಿಗೊಳಪಡುವ ಪ್ರದೇಶ (1000 ಹೆಕ್ಟೇರುಗಳು) |
|---|---|---|
| 1 | 2 | 3 |
| 1. | ಅಣೆಕಟ್ಟು ಕಾಲುವೆಗಳು | 77.1 |
| 2. | ಕೃಷ್ಣರಾಜ ಸಾಗರ | 79.3 |
| 3. | ಕಣ್ವ | 2.0 |
| 4. | ಬೈರಮಂಗಲ | 1.6 |
| 5. | ಮಾರ್ಕೋನಹಳ್ಳಿ | 6.1 |
| 6. | ಹೆಬ್ಬಹಳ್ಳ | 1.2 |
| 7. | ನುಗು | 10.5 |
| 8. | ಚಿಕ್ಕಹೊಳೆ | 1.7 |
| 9. | ಮಂಗಳ | 0.8 |
| 10. | ಸುವರ್ಣಾವತಿ | 2.8 |
| 11. | ಗುಂಡಾಲ್ | 4.0 |
| 12. | ನಲ್ಲೂರು ಅಮಾನಿಕೆರೆ | 1.3 |
| 13. | ಕಾಮಸಮುದ್ರ ಏತ ನೀರಾವರಿ ಯೋಜನೆ | 3.1 |
| 14. | ಹುಚ್ಚನ ಕೊಪ್ಪಲು ಏತ ನೀರಾವರಿ ಯೋಜನೆ | 2.3 |
| 15. | ಹೇಮಾವತಿ | 283.6 |
| 16. | ವಾಟೆಹೊಳೆ | 7.5 |
| 17. | ಯಗಚಿ | 21.5 |
| 18. | ಕಬಿನಿ | 87.9 |
| 19. | ಹಾರಂಗಿ | 54.6 |
| 20. | ಚಿಕ್ಲಿಹೊಳೆ | 1.7 |
| 21. | ಮಂಚನಬೆಲೆ | 3.8 |
| 22. | ತಾರಕ | 7.0 |
| 23. | ಅರ್ಕಾವತಿ | 8.6 |
| 24. | ಇಗ್ಗಲೂರು | 4.0 |
| 25. | ಶ್ರೀ ಡಿ. ದೇವರಾಜ ಅರಸು (ವರುಣಾ) ಕಾಲುವೆ | 32.4 |
| 26. | ಉಡುತೊರೆಹಳ್ಳ | 6.3 |
| 27. | ಕೃಷ್ಣರಾಜಸಾಗರದ ಆಧುನೀಕರಣ | 2.0 |
| 28. | ಸಣ್ಣ ನೀರಾವರಿ | 135.0 |
| | ಒಟ್ಟು | 849.70 |

****